# ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ANAB ISO 9001:2015 NVT - QC CERTIFICATE NO 2790095

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕನನೀಸ ಮತ್ತು ಒಚ ಮಂಡಳಿ,
ನಗರ ವಿಭಾಗ (ಜೆ.ಎನ್.ನರ್ಮ್), ಜಲಭವನ, 2ನೇ ಮಹಡಿ, ಪಿ-4,
10ನೇ ಮುಖ್ಯ ರಸ್ತೆ, 3ನೇ ಅಡ್ಡರಸ್ತೆ, ಸರಸ್ವತಿಪುರಂ, ಮೈಸೂರು- 570009
☎: 0821-2411463, ▮: 9480813129, Email: kwbmysjnee@gmail.com


ಸಂಖ್ಯೆ: ಕಜಮ/ಕಾಅ/ನಗರ-ವಿಭಾಗ/ಜೆ.ಎನ್.ನರ್ಮ್/ತಾಂತ್ರಿಕ/ಸಅ-3/ಕ-1155/ 2158 /2022-23, ದಿ: 22.12.2022

ಗೆ,

ಆಯುಕ್ತರು,
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ,
ಮೈಸೂರು.

ಮಾನ್ಯರೇ,

**ವಿಷಯ :** ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಸರ್ಕಾರಿ ಉತ್ತನಹಳ್ಳಿ ಗ್ರಾಮದ ಮೋಜಣಿ ಸಂ: 144/4, 144/8, 144/13, 144/14, 144/6 ಮತ್ತು ಇತರೆರಲ್ಲಿ ಒಟ್ಟು 13 ಎಕರೆ 28.25 ಗುಂಟೆ ಪ್ರದೇಶದಲ್ಲಿ ಶ್ರೀ ಸಿ.ಬಾಲಚಂದ್ರ, ಶ್ರೀವತ್ಸ ಮತ್ತು ಹೆಚ್.ಆರ್.ಸತ್ಯನಾರಾಯಣ ರಾವ್, #12, ಮಹಾಲಕ್ಷ್ಮೀಪುರಂ, ಎಸ್.ಎನ್.ಬಡಾವಣೆ, 2ನೇ ಹಂತ, ಬೆಂಗಳೂರು- 560086 ರವರು ನಿರ್ಮಿಸಿರುವ ಖಾಸಗಿ ಬಡಾವಣೆಯ ನೀರು ಸರಬರಾಜು ಮತ್ತು ಒಳಚರಂಡಿ ಸೌಲಭ್ಯಗಳ ಕಾಮಗಾರಿಗಳ ವ್ಯವಸ್ಥೆಯ ಸ್ಥಿತಿ ವರದಿಯ ಬಗ್ಗೆ.

**ಉಲ್ಲೇಖ :**

1. ಅಧೀಕ್ಷಕ ಅಭಿಯಂತರರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ರವರ ಪತ್ರದ ಸಂಖ್ಯೆ: 1191/2017-18, ದಿ: 10.07.2017.
2. ಆಯ್ಕೆ ಶ್ರೇಣಿ ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ಮೈಸೂರು ವಲಯ, ಮೈಸೂರು ರವರ ನಡವಳಿ ಪತ್ರದ ಸಂಖ್ಯೆ: 2331/2017-18, ದಿ: 03.02.2018.
3. ಆಯ್ಕೆ ಶ್ರೇಣಿ ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ಮೈಸೂರು ವಲಯ, ಮೈಸೂರು ರವರ ನಡವಳಿ ಪತ್ರದ ಸಂಖ್ಯೆ: 2378/2017-18, ದಿ: 07.02.2018.
4. ಮಾಲೀಕರ ಪತ್ರದ ದಿನಾಂಕ: 14.12.2022.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ, ನಂ.2 ನಗರ ಉಪ-ವಿಭಾಗ, ಜೆ.ಎನ್.ನರ್ಮ್, ಮೈಸೂರು ರವರ ಪತ್ರದ ಸಂಖ್ಯೆ: 311/2022-23, ದಿ: 14.12.2022.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮೇಲ್ಕಂಡ ಖಾಸಗಿ ವಸತಿ ಬಡಾವಣೆಯನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದಿಸಿ ಮತ್ತು ನಿರಾಕ್ಷೇಪಣಾ ಪತ್ರವನ್ನು ಉಲ್ಲೇಖಿತ(1) ರ ಪತ್ರದಲ್ಲಿ ನೀಡಲಾಗಿರುತ್ತದೆ. , ಶ್ರೀ ಸಿ.ಬಾಲಚಂದ್ರ, ಶ್ರೀವತ್ಸ ಮತ್ತು ಹೆಚ್.ಆರ್.ಸತ್ಯನಾರಾಯಣ ರಾವ್, #12, ಮಹಾಲಕ್ಷ್ಮೀಪುರಂ, ಎಸ್.ಎನ್.ಬಡಾವಣೆ, 2ನೇ ಹಂತ, ಬೆಂಗಳೂರು- 560086 ಇವರು ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಸರ್ಕಾರಿ ಉತ್ತನಹಳ್ಳಿ ಗ್ರಾಮದ ಮೋಜಣಿ ಸಂ: 144/4, 144/8, 144/13, 144/14, 144/6 ಮತ್ತು ಇತರೆರಲ್ಲಿ ಒಟ್ಟು 13 ಎಕರೆ 28.25 ಗುಂಟೆಯಲ್ಲಿ ನಿರ್ಮಿಸಿರುವ ಖಾಸಗಿ ಬಡಾವಣೆಗೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಯ ಅಂದಾಜು ಪಟ್ಟಿಯನ್ವಯ ರೂ.58.40 ಲಕ್ಷ ಮತ್ತು ರೂ.87.66 ಲಕ್ಷಗಳಿಗೆ ಉಲ್ಲೇಖ(2 ಮತ್ತು 3) ರ ನಡವಳಿಯಲ್ಲಿ ಕ್ರಮವಾಗಿ ಅನುಮೋದನೆಗೊಂಡಿರುತ್ತವೆ. ಸದರಿ ಕಾಮಗಾರಿಯ ಕಾರ್ಯಾದೇಶವನ್ನು ಈ ಕಛೇರಿ ಪತ್ರ ಸಂಖ್ಯೆ: 1784/2020-21, ದಿ: 17.12.2020 ರಲ್ಲಿ ನೀರು ಸರಬರಾಜು ಹಾಗೂ ಒಳಚರಂಡಿ ವ್ಯವಸ್ಥೆಗೆ ನೀಡಲಾಗಿರುತ್ತದೆ.

ಮುಂದುವರೆದಂತೆ, ಬಡಾವಣೆಯ ಮಾಲೀಕರು ಕಾಮಗಾರಿಯನ್ನು ಪೂರ್ಣಗೊಳಿಸಿದ್ದು, ನಿರಾಕ್ಷೇಪಣಾ ಪತ್ರಕ್ಕಾಗಿ ಉಲ್ಲೇಖ(4) ರ ಪತ್ರದಲ್ಲಿ ಕೋರಿರುತ್ತಾರೆ. ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.02 ನಗರ ಉಪವಿಭಾಗ (ಜೆ.ಎನ್.ನರ್ಮ್), ಮೈಸೂರು ವರದಿ ಮಾಡಿ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಯನ್ನು ಸ್ವಯಂ ನಿರ್ವಹಣೆಯ ಆಧಾರದ ಮೇಲೆ ಮಾಲೀಕರು ಕಾರ್ಯರೂಪಕ್ಕೆ ತಂದಿದ್ದು ಕಾಮಗಾರಿ ಪೂರ್ಣಗೊಳಿಸಿರುತ್ತದೆಂದು ವರದಿ ಮಾಡಿರುತ್ತಾರೆ ಮತ್ತು ಕಾಮಗಾರಿಗಳ ಸ್ಥಿತಿ ವರದಿಯನ್ನು ಉಲ್ಲೇಖ(5) ರಲ್ಲಿ ಸಲ್ಲಿಸಿರುತ್ತಾರೆ.

ಸದರಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು CPHEEO ನಿಯಮಗಳಂತೆ ಚಾಲನೆ ಮತ್ತು ನಿರ್ವಹಣಾ ಕಾರ್ಯಕ್ಕೆ ಬಡಾವಣೆಯ ಮಾಲೀಕರ ಜವಾಬ್ದಾರಿಯಾಗಿರುತ್ತದೆ. ಸದರಿ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಮೈಸೂರು ಮಹಾನಗರ ಪಾಲಿಕೆ/ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸುವವರೆಗೆ ಯಾವುದೇ ಕಳ್ಳತನ ಅಥವಾ ಅಸ್ಥಾಪನೆಯ ಬದಲಿತ್ವವನ್ನು ತಪ್ಪಿಸಲು ಅಗತ್ಯ ವಾಚ್ ಮತ್ತು ವಾರ್ಡ್ ಸಹ ಒದಗಿಸಬೇಕಾಗುತ್ತದೆ.

ದಿನಾಂಕ: 27-04-2022 ರಂದು ಮುಖ್ಯ ಅಭಿಯಂತರರು, ಕನನೀಸ ಮತ್ತು ಒ.ಚ ಮಂಡಳಿ, ಮೈಸೂರು ವಲಯ, ಮೈಸೂರು ರವರ ಅಧ್ಯಕ್ಷತೆಯಲ್ಲಿ ನಡೆದ 84ನೇ ತಾಂತ್ರಿಕ ಸಮಿತಿ ಸಭೆಯ ನಡವಳಿಯ ನಿರ್ದೇಶನದಂತೆ ಸದರಿ ಬಡಾವಣೆಯ ನೀರು ಸರಬರಾಜು ಕಾಮಗಾರಿಗೆ ಸಂಬಂಧಿಸಿದಂತೆ ಜಲಸಂಗ್ರಹಗಾರದ ನಿರ್ಮಾಣ ವಂತಿಕೆ ರೂ36,79,260/- ಗಳನ್ನು ಪಾವತಿಸಿಕೊಂಡು ಪ್ರತ್ಯೇಕ ಖಾತೆಯಲ್ಲಿರಿಸಿಕೊಳ್ಳಲು ಕೋರಲಾಗಿದೆ.

ಅದರಂತೆ, ಸ್ಥಿತಿ ವರದಿಯನ್ನು ಮೇಲಿನ ಷರತ್ತುಗಳನ್ವಯವಾಗಿ ನೀಡಲಾಗಿರುತ್ತದೆ.

ಅಡಕ: ಸ್ಥಿತಿ ವರದಿ -1 ಪ್ರತಿ

ತಮ್ಮ ವಿಶ್ವಾಸಿ,
ಸಹಿ/-
ಕಾರ್ಯಪಾಲಕ ಅಭಿಯಂತರು
ಕನನೀಸ ಮತ್ತು ಒಚ ಮಂಡಳಿ
ನಗರ ವಿಭಾಗ (ಜೆ.ಎನ್.ನರ್ಮ್),
ಮೈಸೂರು.

1. ಪ್ರತಿಯನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ನಂ.02 ನಗರ ಉಪ ವಿಭಾಗ (ಜೆ.ಎನ್.ನರ್ಮ್), ಮೈಸೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
2. ಪ್ರತಿಯನ್ನು ಶ್ರೀ ಸಿ.ಬಾಲಚಂದ್ರ, ಶ್ರೀವತ್ಸ ಮತ್ತು ಹೆಚ್.ಆರ್.ಸತ್ಯನಾರಾಯಣ ರಾವ್, #12, ಮಹಾಲಕ್ಷ್ಮೀಪುರಂ, ಎಸ್.ಎನ್.ಬಡಾವಣೆ, 2ನೇ ಹಂತ, ಬೆಂಗಳೂರು- 560086 ರವರ ಮಾಹಿತಿಗಾಗಿ ಸ್ಥಿತಿ ವರದಿ ಪ್ರತಿಯೊಂದಿಗೆ ಕಳುಹಿಸಿದೆ.

ಕಾರ್ಯಪಾಲಕ ಅಭಿಯಂತರು
ಕನನೀಸ ಮತ್ತು ಒಚ ಮಂಡಳಿ
ನಗರ ವಿಭಾಗ (ಜೆ.ಎನ್.ನರ್ಮ್),
ಮೈಸೂರು
22/12